ಅನೇಕ ಕಬ್ಬು ಬೆಳಿಗಾರರಿಂದ ಬಂದಿದೆ. ಆದಕಾರಣ ಈ ಸಕ್ಕರೆ ಕಾರ್ಖಾನೆ ವ್ಯಾಪ್ತಿಯಲ್ಲಿ ಬರತಕ್ಕ ಎಲ್ಲಾ ತಾಲ್ಲೂಕುಗಳ ರೈತರ ಕಬ್ಬನ್ನು ಸರಿಸಮಾನವಾಗಿ ಎಲ್ಲಾ ರೈತರಿಗೆ ಅನುಕೂಲವಾಗುವಂತೆ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಸಿ. ಸಿದ್ದನಗೌಡರ್ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಲ್ಲಿ ನಾನು ಕೇಳಿಕೊಳ್ಳುವುದು ಇಷ್ಟೆ. ಕಲಘಟಗಿ ರೈತರು ಕಬ್ಬು ತೆಗೆದುಕೊಳ್ಳಬೇಕು ಶಿಗ್ಗಾಂವಿ ರೈತರ ಕಬ್ಬನ್ನು ತೆಗೆದುಕೊಳ್ಳಬಾರದು ಅಂತ ಏನೂ ಇಲ್ಲ ಅಲ್ಲಿ ಒಂದು ವ್ಯವಸ್ಥೆಯನ್ನು ಮಾಡಿ ಯಾರ್ಯಾರು ಯಾವಾಗ ಕಬ್ಬನ್ನು ಕಟಿಂಗ್ ಮಾಡಬೇಕೆಂದು ಸೂಚನೆ ಕೊಟ್ಟಿರುತ್ತಾರೆ. ಆ ಪ್ರಕಾರವೇ ಮಾಡಿಕೊಂಡು ಹೋಗುತ್ತಿದ್ದಾರೆ. ತಮ್ಮಲ್ಲಿ ಏನಾದರೂ ನಿರ್ದಿಷ್ಟವಾದ ಮಾಹಿತಿ ಇದ್ದು ಅವರು ಮಾಡುತ್ತಿರುವುದು ಸರಿಯಲ್ಲ ಎಂಬುದನ್ನು ನನ್ನ ಗಮನಕ್ಕೆ ತಂದರೆ ಸಂಬಂಧಪಟ್ಟವರಿಗೆ ಹೇಳಿ ಉತ್ತರ ಕೊಡಲಿಕ್ಕೆ ನಾನು ವ್ಯವಸ್ಥೆ ಮಾಡುತ್ತೇನೆ.

ಶಿಕಾರಿಪುರದಲ್ಲಿ ಕುಡಿಯುವ ನೀರಿನ ಸಮಸ್ಯೆ

16 - ಶ್ರೀ ಬಿ.ಎಸ್. ಯಡಿಯೂರಪ್ಪ, (ಶಿಕಾರಿಪುರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಕಾರಿಪುರ ಕುಡಿಯುವ ನೀರಿನ ತೊಂದರೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಕುಡಿಯುವ ನೀರನ್ನು ಒದಗಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ. ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಪ್ರಸ್ತುತದಲ್ಲಿ ಪ್ರತಿದಿನ 5.70,000 ಗ್ಯಾಲನ್ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಈ ಪಟ್ಟಣದಲ್ಲಿ ಕುಡಿಯುವ ನೀರಿನ ಕೊರತೆ ಸ್ವಲ್ಪ ಇದೆ.

ಆ) ಶಿಕಾರಿಪುರ ಪಟ್ಟಣಕ್ಕೆ ಸುಧಾರಿತ ನೀರು ಸರಬರಾಜು ಮಾಡಲು ರೂ. 80.000 ಲಕ್ಷ ಮೊತ್ತದ ಅಂದಾಜು ಪಟ್ಟಿಗೆ ಸರ್ಕಾರವು ತಾತ್ವಿಕ ಅನುಮೋದನೆಯನ್ನು ನೀಡಿರುತ್ತದೆ. ಪುರಸಭೆ ವಂತಿಗೆಯಾದ ರೂ. 12000 ಲಕ್ಷಗಳಲ್ಲಿ ಮೂರನೇ ಒಂದು ಭಾಗದ ಹಣ ರೂ. 4-00 ಲಕ್ಷಗಳನ್ನು ಪಾವತಿ ಮಾಡಿದ ನಂತರ ಈ ಯೋಜನೆಗೆ ಆಡಳಿತ ಮಂಜೂರಾತಿಯನ್ನು ನೀಡಿ ನಂತರ ಯೋಜನೆಯನ್ನು ಕಾರ್ಯಗತ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೆ, ಶಿಕಾರಿಪುರ ಪುರಸಭೆ ಕುಡಿಯುವ ನೀರಿನ ಯೋಜನೆ ಬಗ್ಗೆ ಮಂಜೂರಾತಿಯಾಗಿದೆ ಎಂದು ಹೇಳಿದ್ದಾರೆ. ಶಿಕಾರಿಪುರದ ಪುರಸಭೆಯಲ್ಲಿ ಹಣಕಾಸಿನ ಪರಿಸ್ಥಿತಿ ಹದಗೆಟ್ಟು ಅಲ್ಲಿನ ನೌಕರರಿಗೆ ಕಳೆದ ಮೂರು ತಿಂಗಳಿಂದ ಡೆವಲಪ್ಮೆಂಟ್ ಆಕ್ಟಿವಿಟೀಸ್‌ನಲ್ಲಿ ಕಾಂಪ್ಲೆಕ್ಸ್ ಕಟ್ಟಿದ್ದಾರೆ. ಅದಕ್ಕೆ ಸಾಕಷ್ಟು ಪುರಸಭೆ ಹಣವನ್ನು ಖರ್ಚು ಮಾಡಿದ್ದೇವೆ. 4 ಲಕ್ಷ ರೂಪಾಯಿಗಳ ಕುಡಿಯುವ ನೀರಿನ ಯೋಜನೆ ಪ್ರಾರಂಭ ಮಾಡುವುದಕ್ಕೆ ಪುರಸಭೆಗೆ ಬಾಬ್ತು ಕೊಡಬೇಕೆಂದು ಹೇಳಿದ್ದೀರಿ. ತಾವು ಏನು ಡೆವಲಪ್ಮೆಂಟ್ ಗ್ರಾಂಟ್ಸ್ ಪುರಸಭೆಗೆ ಕೊಡುತ್ತೀರಿ ಅದರಲ್ಲಿ ಜಮಾಮಾಡಿಕೊಳ್ಳಿ ಬೇಕಾದರೆ ಅದರ ಆಧಾರದ ಮೇಲೆ ತಕ್ಷಣ ಕೆಲಸ ಮಾಡುವುದಕ್ಕೆ ಆದೇಶ ಕೊಡಬಹುದೇ ಸ್ವಾಮಿ?

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಸಭಾಧ್ಯಕ್ಷರೆ, ಅಲ್ಲಿ ಎರಡು ಪಂಪ್‌ಗಳಿವೆ. ಒಂದು ಪಂಪ್ ಸ್ವಲ್ಪ ಹಳೆಯದಿದೆ. ಅದರಿಂದ ಸ್ವಲ್ಪ ತೊಂದರೆಯಾಗುತ್ತಿದೆ. ಆ ಪಂಪ್ ಬದಲಾಯಿಸಿದ ನಂತರ ಬಹುಶಃ ಕುಡಿಯುವ ನೀರಿನ ಪರಿಸ್ಥಿತಿ ಸುಧಾರಿಸುತ್ತದೆ.

ಶ್ರೀ ವೈಜನಾಥ ಪಾಟೀಲ್ : ಅದರ ಬಗ್ಗೆ ಒಂದು ಜನರಲ್ ಪಾಲಿಸಿ ಇದೆ. ಎಲ್ಲಾ ಮುನಿಸಿಪಾಲಿಟಿಗಳವರು ಮೂರನೇ ಒಂದು ಭಾಗ ಕೊಡಬೇಕೆಂದಿದೆ. ಹಿಂದಿನ ಸರ್ಕಾರದಿಂದಲೂ ಹಾಗೆ ಒಂದು ಪಾಲಿಸಿ ಇದೆ. ತಾವು ಸಲಹೆ ಕೊಡುತ್ತಿದ್ದೀರಿ ಸ್ಪೆಷಲ್ ಗ್ರಾಂಟ್ ಕೊಡಿ ಎಂದು. ಸಾಧ್ಯವಾದರೆ ಕೊಡುತ್ತೇವೆ. ಇಲ್ಲದಿದ್ದರೆ ಸ್ಪೆಷಲ್ ಗ್ರಾಂಟ್‌ನಲ್ಲಿ ಕೊಡುತ್ತೇವೆ. ಮೂರನೇ ಒಂದು ಭಾಗ 4 ಲಕ್ಷ ರೂಪಾಯಿಗಳನ್ನು ಮುನಿಸಿಪಾಲಿಟಿಯವರು ಕಟ್ಟಬೇಕು. ಮೂರನೇ ಒಂದು ಭಾಗ ಸರ್ಕಾರದವರು ಮತ್ತು ಮೂರನೇ ಒಂದು ಭಾಗವನ್ನೂ ಲೋನ್ ಆಗಿ ತೆಗೆದುಕೊಳ್ಳಬೇಕು ಎಂದು ಸರ್ಕಾರದ ನೀತಿ ಇದೆ. ಅನೇಕ ಮುನಿಸಿಪಾಲಿಟಿಯವರು ಮೂರನೆಯ ಒಂದು ಭಾಗವನ್ನೂ ಕೊಡುತ್ತಾ ಇದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಲ್ಲಿ ನಮ್ಮ ಬಾಬ್ತು ನಾಲ್ಕು ಲಕ್ಷ ರೂಪಾಯಿಗಳನ್ನು ಕಟ್ಟಿದರೆ ಕೆಲಸ ಶುರು ಮಾಡುತ್ತೇವೆಂದು ಹೇಳುತ್ತಾರೆ. ಅಲ್ಲಿ ಪುರಸಭೆಯಲ್ಲಿ ನಾಲ್ಕು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಕಾಂಪ್ಲೆಕ್ಸ್ ಮಾಡಿ ಪುರಸಭೆಯವರು ಆಸ್ತಿ ಮಾಡಿದ್ದಾರೆ. ಅಕ್ಕಾಯಿ ಬದಲು ಡೆವಲಪ್ಮೆಂಟ್ ಗ್ರಾಂಟ್ ಏನು ಕೊಡುತ್ತೀರಿ ಅದನ್ನು ಬಿಡುಗಡೆ ಮಾಡಲಿಲ್ಲ. ಅದಕ್ಕೆ ನಾನೇನು ಹೇಳಿದೆ ಆ 4 ಲಕ್ಷ ರೂಪಾಯಿ ಹಿಡಿದುಕೊಂಡು ಆ ರೀತಿ ಆದೇಶ ಕೊಟ್ಟರೆ ಕುಡಿಯುವ ನೀರಿನ ಅಭಾವವಾದರೂ ತಪ್ಪುತ್ತದೆ. ಆದ್ದರಿಂದ ಅದನ್ನಾದರೂ ಮಾಡಬಹುದು ಎಂದು ಕೇಳಿದೆ.

ಶ್ರೀ ವೈಜನಾಥ ಪಾಟೀಲ್ : ಅಕ್ಕಾಯಿ ಗ್ರಾಂಟ್‌ನ್ನು ಕೊಡದಿದ್ದರೆ ಅದನ್ನು ಬಿಡುಗಡೆ ಮಾಡುತ್ತೇವೆ, ಮುನಿಸಿಪಾಲಿಟಿಯವರು ಕಟ್ಟಬೇಕಾದ ಹಣ ಕಟ್ಟದಿದ್ದರೆ ಸರ್ಕಾರ ಕ್ರಮ ಕೈಗೊಳ್ಳುತ್ತದೆ.

ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳ ಇಲಾಖೆಯಡಿಯಲ್ಲಿ ಬರುವ ಸಾರ್ವಜನಿಕ ಉದ್ಯಮಗಳು

353 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ, (ಜೀರಾದ್) : ಮಾನ್ಯ ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾರಿ ಮತ್ತು ಮಧ್ಯಮ ಕೈಗಾರಿಕಾ ಇಲಾಖೆಯಡಿಯಲ್ಲಿ ಬರುವ ಸಾರ್ವಜನಿಕ ಉದ್ಯಮಗಳು ಯಾವುವು?

ಆ) ಈ ಉದ್ಯಮಗಳಲ್ಲಿ ಎಷ್ಟು ಲಾಭದಲ್ಲಿ ನಡೆಯುತ್ತಿವೆ ಹಾಗೂ ಎಷ್ಟು ನಷ್ಟದಲ್ಲಿ ನಡೆಯುತ್ತಿವೆ?

ಇ) ಕಳೆದ 5 ವರ್ಷಗಳಲ್ಲಿ ಇವು ಅನುಭವಿಸಿದ ಲಾಭ ಹಾಗೂ ನಷ್ಟದ ಪ್ರಮಾಣವೆಷ್ಟು?

ಈ) ನಷ್ಟದಲ್ಲಿರುವ ಸಾರ್ವಜನಿಕ ಉದ್ಯಮಗಳನ್ನು ಖಾಸಗಿಯವರಿಗೆ ವಹಿಸಿಕೊಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ ಹಾಗಿದ್ದಲ್ಲಿ, ಅಂತಹ ಉದ್ಯಮಗಳ ಹೆಸರುಗಳ ವಿವರಗಳನ್ನು ಒದಗಿಸುವುದು?

ಉ) ಇಲ್ಲದಿದ್ದಲ್ಲಿ ಅವುಗಳ ಪುನಶ್ಚೇತನಕ್ಕಾಗಿ ಸರ್ಕಾರ ಯಾವ ಯಾವ ಕ್ರಮಗಳನ್ನು ರೂಪಿಸಲಾಗಿದೆ?

ಶ್ರೀ ಆರ್.ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಸಚಿವರು) :